**<u>ಸಾಕ್ಷಿಯನ್ನು ದಿನಾಂಕಃ 14-12-2021 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಮುಖ್ಯ ವಿಚಾರಣೆಃ ಶ್ರೀ ಕೆ ಬಿ ಆರ್ ವಕೀಲರವರಿಂದಃ</u>**

**ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ. ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸದರಿ ಸಾಕ್ಷಿಯನ್ನು ಪಿ ಡಬ್ಲೂ 1 ಎಂದು ಪರಿಗಣಿಸಲಾಗಿದೆ.**

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಅಸಲು ದಾವಾ ಸಂಖ್ಯೆ 65/2013 ರ ರೋಜನಾಮೆ, ವಾದಪತ್ರ, ರಾಜಿ ಅರ್ಜಿ, ರಾಜಿ ಡಿಕ್ರಿ ಮತ್ತು ವಕಾಲತ್ ನಾಮಾ ಇವುಗಳು ದೃಢೀಕೃತ ಪ್ರತಿಗಳನ್ನು ಹಾಜರುಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಪಿ 1 ರಿಂದ 5 ಎಂದು, ಸರ್ವೆ ನಂ.75/ಜಿ ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನಿಪಿ 6 ಎಂದು, ಹಕ್ಕು ಬದಲಾವಣೆಯ ವಹಿಯ ದೃಢೀಕೃತ ಪ್ರತಿಯನ್ನು ನಿಪಿ 7 ಎಂದು, ಡೋರ್ ನಂ.11 ಕ್ಕೆ ಸಂಬಂಧಿಸಿದ ಡಿಸಿಬಿ ರಿಜಿಸ್ಟರ್ ನ್ನು ನಿಪಿ 8 ಎಂದು, ಡೋರ್ ನಂ.11 ಕ್ಕೆ ಸಂಬಂಧಿಸಿದ ಹೌಸ್ ಲಿಸ್ಟ್ ನ್ನು ನಿಪಿ 9 ಎಂದು, ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿಪಿ 10 ಎಂದು, ವಿವಾಹನ ಬಂಧನದ ಕರಾರು ದಸ್ತಾವೇಜಿನ ನೋಂದಾಯಿತ ಪ್ರತಿಯನ್ನು ನಿಪಿ 12 ಎಂದು, ಶಾಲಾ ದೃಢೀಕೃತ ಪತ್ರವನ್ನು ನಿಪಿ 13 ಎಂದು, ಡೋರ್ ನಂ.10 ಕ್ಕೆ ಸಂಬಂಧಿಸಿದ ಎರಡು ಡಿಸಿಬಿ ರಿಜಿಸ್ಟರ್ ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಪಿ 14 ಮತ್ತು 15 ಎಂದು, ಪಟ್ಟಾ ಪುಸ್ತಕವನ್ನು ನಿಪಿ 16 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**<u>ಪಾಟೀಸವಾಲುಃ</u>** ಶ್ರೀ ಎಸ್ ಜೆ ಕೆ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**